ısist upon that the concerned Minister hould be present and answer all the uestions relating to his portfolio.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ುಳಿದಿರತಕ್ಕ ಪ್ರಶ್ನೆಗಳು ಎಲ್ಲೆಲ್ಲಿ pending ಆಗಿವೆ ಂಬುದನ್ನು ತಿಳಿಸಬೇಕು. ಕೆಲವು ಪ್ರಶ್ನೆಗಳಿಗೆ ಡವಾಗಿ ಉತ್ತರ ಬಂದಿದೆ; ಕೆಲವು ಇನ್ನೂ ಸರ್ಕಾರ ುಲ್ಲಯೇ ಉಳಿದಿವೆ. ಉತ್ತರವನ್ನು ಓದಗಿಸಬೇಕಾದರೆ ಎರಡೂವರೆ ತಿಂಗಳು ಬೇಕಾಗುತ್ತದೆಯೇ?

**Mr. SPEAKER.**—I do not know the ıature of the question put by you and I do not know why the Government ıave not furnished the replies.

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದ ಮಟ್ಟಿಗೂ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಒದಗಿಸಿದ್ದೇವೆ. But considering the number of questions put by the Hon'ble Members, we have answered quite a number of questions.

**Mr. SPEAKER.**—With regard to the original questions, of course, the Hon'ble Members have sent the questions about two and a half months back and there is no reason why Government have not sent the replies as late as this. But I will find out from the nature of the questions whether there are any good reasons to withhold the answers.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ನಡೆದ ಒಂದು ಖೂನಿ ಕೇಸಿನ ಸಂಬಂಧದಲ್ಲಿ ನಾನೊಂದು ಪ್ರಶ್ನೆಯನ್ನು ಕಳುಹಿಸಿದ್ದೇನೆ. ಅದಕ್ಕೆ ಇದುವರೆಗೂ ಉತ್ತರ ಓದಗಿಸದಿರುವುದರಿಂದ ಈ ಮಾನ್ಯ ಸಭೆಯ ಸದಸ್ಯರಿಗೆ ಪ್ರಶ್ನೆ ಕೇಳುವುದಕ್ಕಿದ್ದ ಅವಕಾಶವನ್ನು ಕಿತ್ತುಕೊಂಡ ಹಾಗಾಗಿದೆ. ಆದ್ದರಿಂದ ನಾನು ಇನ್ನೊಂದು ಸಾರಿ ತಮಗೆ ಅಪೀಲ್ ಮಾಡಿಕೊಳ್ಳುತ್ತೇನೆ. ಇಂಥ ಪ್ರಶ್ನೆಗೆ ಅವಕಾಶ ದೊರೆಯುವಂತೆ ಮಾಡಬೇಕು.

ಅಧ್ಯಕ್ಷರು.—ಸದ್ಯಕ್ಕೆ ನಮ್ಮ ನಿಬಂಧನೆಗಳಲ್ಲಿ procedure ಇರುವುದೇ ಆ ರೀತಿ. ಅಲ್ಲದೆ, ಅದು ಇನ್ನೂ police investigationನ್ನಲ್ಲಿದೆಯೆಂದು ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—Police investigationನ್ನಲ್ಲಿದ್ದರೂ ಅದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಚಾರ್ಜ್ ಷೀಟ್ ಹಾಕುವ ವರೆಗೂ discuss ಮಾಡಬಹುದು.

**Sri A. BHEEMAPPA NAIK** (Molakalmuru).—As soon as an F.I.R. is sent, it will be *sub-judice* Sir.

**Mr. SPEAKER.**—I have given a ruling that it will not be *sub-judice* unless a charge-sheet is filed in the court.

ಶ್ರೀ ಕೆ. ಪಂಚಾಕ್ಷರಯ್ಯ (ಅರಸೀಕೆರೆ).—ಇನ್ನೊಂದು ವಿಷಯ, ಸ್ವಾಮಿ. ಪ್ರಶ್ನೆಗಳನ್ನು ದಿನಚರಿ ಅಜೆಂಡಾದಲ್ಲಿ ಸೇರಿಸುವುದನ್ನು ಸರಿಯಾಗಿ Regulate ಮಾಡುವುದಿಲ್ಲ. ಒಂದು ದಿವಸ ಐದೇ ಪ್ರಶ್ನೆಯಿರುತ್ತದೆ. ಇನ್ನೊಂದು ದಿವಸ 40-50 ಪ್ರಶ್ನೆಗಳಿರುತ್ತವೆ. ಹೆಚ್ಚಿಗೆ ಪ್ರಶ್ನೆಗಳಿದ್ದಾಗ ಕಾಲಾವಕಾಶವಿಲ್ಲವೆಂದು ಬೇಗ ಬೇಗ ಪೂರೈಸಿಬಿಡುತ್ತಾರೆ. ಆದ್ದರಿಂದ ಪ್ರಶ್ನೆಗಳನ್ನು ಸರಿಯಾಗಿ Regulate ಮಾಡಬೇಕು.

ಅಧ್ಯಕ್ಷರು.—ಮೊದಲನೆಯ ಸಲ ಬಂದ ಪ್ರಶ್ನೆಗಳನ್ನು ನಿಗದಿಯಾದ ದಿನಗಳ ಮೇಲೆ ಲೆಕ್ಕ ಹಾಕಿ ದಿವಸಕ್ಕೆ 20 ಪ್ರಶ್ನೆಯೆಂದು ಮಾಡಿತ್ತು. ಎರಡನೆಯ ಸಾರಿ ಹೆಚ್ಚಿಗೆ ಪ್ರಶ್ನೆಗಳು ಬಂದದ್ದರಿಂದ ಹೆಚ್ಚಿಗೆ ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕಾಯಿತು. ಮೊದಲನೆಯ ಸಲ ಸರಿಯಾಗಿ distribute ಮಾಡಿದ್ದೆವು.

Now the next item on the agenda, *viz*, the Special Resolutions, will be taken up.

---

## Question No. 205 *re*, Totis and Talaries.

ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಸ್ವಾಮಿ, ನಿನ್ನೆ ದಿವಸ ನನ್ನ ಪ್ರಶ್ನೆಯನ್ನು ಇಂದು ತೆಗೆದುಕೊಳ್ಳುವುದಾಗಿ ಅಪ್ಪಣೆ ಮಾಡಿದ್ದಿರಿ. ಅದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಂತ್ರಿಗಳಿಲ್ಲ; ಪ್ರಶ್ನೋತ್ತರಗಳ ಕಾಲ ಮುಗಿದಿದೆ.

ಶ್ರೀ ಟಿ. ಹನುಮಯ್ಯ.—ಅವರು ಇಲ್ಲದಿದ್ದರೆ ನನ್ನ ತಪ್ಪೇ? ನಿನ್ನೆ ದಿವಸ ತಾವು ಅಪ್ಪಣೆಮಾಡಿಬಿಟ್ಟಿದ್ದೀರಿ. ಇದು ಬಹಳ ಮುಖ್ಯವಾದ ಪ್ರಶ್ನೆ. (205ನೆಯ ಪ್ರಶ್ನೆ). ಇವೊತ್ತು ತೆಗೆದುಕೊಳ್ಳುತ್ತೇವೆಂದು ಹೇಳಿದ ಮೇಲೆ ಅದಕ್ಕೆ ಅವಕಾಶ ಕೊಡಬೇಕು. ನಾನು ಆ ಪ್ರಶ್ನೆಯ ಮೇಲೆ ಒಂದು Statement ಕೊಡಬಯಸುತ್ತೇನೆ.

**Mr. SPEAKER.**—Hon'ble Member cannot make a Statement. He can ask for any information.

ಶ್ರೀ ಟಿ. ಹನುಮಯ್ಯ.—ಒಂದು ಪುಟ್ಟ Statement ಕೊಡುವುದಕ್ಕೆ ಅವಕಾಶವಿದೆ. ಹಿಂದೆ ಆ ರೀತಿ ಅವಕಾಶಕೊಟ್ಟಿದೆ. ಈ ವಿಷಯದ ಮೇಲೆ ಅನೇಕ ಸಾರಿ ಪ್ರಶ್ನೆಗಳು ಬಂದಿವೆ. ಪ್ರತಿಯೊಂದು ಪ್ರಶ್ನೆಗೂ ಮಂತ್ರಿಗಳು ಕೇವಲ 'yes' or 'no' ಎಂದು ಉತ್ತರ ಹೇಳುತ್ತಾರೆ, ಅಷ್ಟೆ. ಆದ್ದರಿಂದ ತಾವು ನನಗೆ ಒಂದು Statement ಕೊಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಪ್ರಶ್ನೋತ್ತರ ಕಾಲ ಇದು. Information ಏನಾದರೂ ಕೇಳುವುದಿದ್ದರೆ ಕೇಳಿ. Statement ಮಾಡುವುದಕ್ಕೆ ಅವಕಾಶವಿಲ್ಲ.

10 A. M.

ಶ್ರೀ ಟಿ. ಹನುಮಯ್ಯ.—ಸಾಮಾನ್ಯವಾಗಿ ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಲ್ಲಿರತಕ್ಕ ತೋಟಿತಳವಾರರಿಗೆಲ್ಲಾ ಅಲ್ಲ ಸಂಬಳ ಸಾರಿಕೆಗಳನ್ನು ಕೊಡಲಾಗುತ್ತದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವುಕಡೆ ಹಾಗೆ ಕೊಡುತ್ತಿರಬಹುದೋ ಏನೋ ನನಗೆ ಗೊತ್ತಿಲ್ಲ. ಬೊಂಬಾಯಿ ಪ್ರಾಂತ್ಯದಲ್ಲೇನೋ ಕೊಡುತ್ತಿದ್ದಾ

(ಶ್ರೀ ಕಡಿದಾಳ್ ಮಂಜಪ್ಪ.)

ರೆಂದು ಕೆಲವರು ಹೇಳಿದರು. ಆದರೆ ನನಗೆ ಅಧಿಕೃತವಾಗಿ ಯಾವುದೂ ತಿಳಿದುಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಹೋಗಲಿ, ಅವರು ಈ ಕಂದಾಯ, ಕವಳಿಗೆ ಇತ್ಯಾದಿಗಳನ್ನು ವಸೂಲ್ಮಾಡುತ್ತ 24 ಗಂಟೆಗಳ ಕಾಲವೂ ಸರ್ಕಾರಿ ಕೆಲಸದಲ್ಲೇ ಇರುತ್ತಾರೆಂಬ ಅಂಶವಾದರೂ ತಮ್ಮ ಗಮನಕ್ಕೆ ಬಂದಿದೆಯೇ?

**Sri Kadidal MANJAPPA.**—They are part-time officials of Government.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅವರು ಸರ್ಕಾರಿ ನೌಕರರಲ್ಲವೇನು?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಪಾರ್ಟ್‌ಟೈಂ ಕೆಲಸಗಾರರು ಅಷ್ಟೇನೆ.

ಶ್ರೀ ಟಿ. ಹನುಮಯ್ಯ.—ಹಾಗೇ ಆಗಲಿ. ಆ ಪಾರ್ಟ್‌ಟೈಂ ಕೆಲಸಗಾರರಿಗೆ ತಾವೇನು ಸಂಭಾವನೆ ಕೊಡುತ್ತಿದ್ದೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಮಿರಾಸೆ ಕೊಡಲಾಗುತ್ತಿದೆ.

ಶ್ರೀ ಟಿ. ಹನುಮಯ್ಯ.—ಅದೇನು ಮಿರಾಸೆಯೋ ನಿರಾಸೆಯೋ!

(ಉತ್ತರವಿಲ್ಲ.)

ಶ್ರೀ ಟಿ. ಹನುಮಯ್ಯ.—ಈ ಮಿರಾಸೆ ಕೊಡತಕ್ಕ ವಿಚಾರದಲ್ಲಿ ಡಿ. ಸಿ. ಬಿ. ತಃಖ್ತೆಯನ್ನು ತಯಾರು ಮಾಡಿಸಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಇನ್ನೂ ಸ್ವಲ್ಪ ಕಾಲ ಹಿಡಿಯುತ್ತದೆ. ಅದನ್ನು ತಯಾರಿಸುವಂತೆ ರೆವಿನ್ಯೂ ಕಮಿಷನರಿಗೆ ತಿಳಿಸಲಾಗಿದೆ.

ಶ್ರೀ ಟಿ. ಹನುಮಯ್ಯ.—ಈ ಪ್ರಶ್ನೆ ಈ ಸಭೆಯ ಮುಂದೆ ಎಷ್ಟು ವರ್ಷಗಳಿಂದ ಬರುತ್ತಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ದಿವಸಗಳಿಂದಲೂ ಬರುತ್ತಿದೆ.

ಶ್ರೀ ಟಿ. ಹನುಮಯ್ಯ.—ತಾವು ಈ ಜನರಿಂದ ಬಲಾತ್ಕಾರವಾಗಿ ಹೀಗೆ ಅವರಿಂದ ಬಿಟ್ಟಿಕೆಲಸ ಮಾಡಿಸಿಕೊಳ್ಳುವುದು ರಾಜ್ಯಾಂಗಕ್ಕೆ ವಿರೋಧವಾಗಿಲ್ಲವೇ? ಈ ಆರ್ಟಿಕಲ್ 23ರ (1) ಮತ್ತು (2) ರಲ್ಲಿ ಹೀಗೆ ಹೇಳಿದೆ:—

> "(1) Traffic in human beings and *begar* and other similar forms of forced labour are prohibited and any contravention of this provision shall be an offence punishable in accordance with law.
>
> "(2) Nothing in this article shall prevent the State from imposing compulsory service for public purposes, and in imposing such service the State shall not make any discrimination on grounds only of religion, race, caste or class or any of them."

ಹೀಗೆ ತಾವು ಇವರ ಜಾತಿಯೊಂದನ್ನೇ ಆಧಾರವಾಗಿಟ್ಟುಕೊಂಡು ಇವರಿಂದ ಹೀಗೆಲ್ಲಾ ಕೆಲಸ ಮಾಡಿಸುತ್ತಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಬರಿ ನಿಮ್ಮ ತರಗತಿಯವರೊಬ್ಬರೇ ಈ ತೋಟಿತಳ್ಳಾರಿಗಳ ಕೆಲಸವನ್ನು ಮಾಡುತ್ತಿಲ್ಲ. ಇನ್ನೂ ಬೇರೆಬೇರೆ ಜಾತಿಯವರೂ ಮಾಡುತ್ತಿದ್ದಾರೆ. ಇವರಿಗೆಲ್ಲಾ ಮಿರಾಸೆ ಮತ್ತು ಇನಾಂತಿ ಜಮೀನುಗಳನ್ನು ಕೊಡಲಾಗಿದೆ. ತಮ್ಮ ಹಕ್ಕನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡಲು ಅವರು ರಾಯರೂ ಒಪ್ಪುವುದಿಲ್ಲ.

ಶ್ರೀ ಟಿ. ಹನುಮಯ್ಯ.—ತಾವು ಹಾಗಾದರೆ ಈಗ ಪ್ರತಿಯೊಂದು ಸಂಸ್ಥೆಯಲ್ಲಿಯೂ ಹಂಗಾಮಿ ಕೆಲಸಗಾರರಿದ್ದರೆ ಅಂಥ ನೌಕರರುಗಳನ್ನೆಲ್ಲಾ ಇದೇ ರೀತಿ ಬಿಟ್ಟುಹೋಗಬೇಕೆಂದು ಹೇಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲಸ ಮಾಡುವುದಕ್ಕೆ ಇಷ್ಟವಿಲ್ಲದವರು ಹಾಗೆ ಮಾಡಬಹುದು.

ಶ್ರೀ ಟಿ. ಹನುಮಯ್ಯ.—ಹಾಗಾದರೆ ಅವರಿಂದ ಬಲಾತ್ಕಾರವಾಗಿ ಕೆಲಸಮಾಡಿಸಿಕೊಳ್ಳಲು ತಮಗೆ ಕಾನೂನು ಪ್ರಕಾರ ಅವಕಾಶವುಂಟೇ?

ಅಧ್ಯಕ್ಷರು.—ಯಾರಿಗೆ ಇಷ್ಟವಿಲ್ಲವೋ ಅಂಥವರು ಬೇಕಾದರೆ ಈ ಕೆಲಸ ಬಿಟ್ಟುಬಿಡಲಿ ಎಂದು ಹೇಳುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಇಂಥಿಂಥವರಿಂದ ಈ ಕೆಲಸಗಳನ್ನು ಮಾಡಿಸಬಾರದೆಂದು ತಾವು ಒಂದು ಆರ್ಡರನ್ನು ಹೊರಡಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇಷ್ಟವಿದ್ದು ಕೆಲಸ ಮಾಡತಕ್ಕವರಿಗೆ ಅವಕಾಶವಿದ್ದೇ ಇದೆ. ಅದಕ್ಕೆಲ್ಲಾ ನಿಬಂಧನೆಗಳಿವೆ. ಬಲಾತ್ಕಾರದಿಂದ ಯಾರಿಂದಲೂ ಕೆಲಸ ತೆಗೆದುಕೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕಿರುವುದಿಲ್ಲ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ಇವರಿಗೆ ಸರಿಯಾಗಿ ಮಿರಾಸೆ ನಲ್ಲುತ್ತಿಲ್ಲವೆಂದು ಸರ್ಕಾರದವರ ಗಮನಕ್ಕೆ ಬಂದಿದೆ. ಆ ಬಗ್ಗೆ ಏನೇನು ಸೂಕ್ತಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತೆಂಬ ಬಗ್ಗೆ ಈಗಾಗಲೆ ತಿಳಿವಳಿಕೆಗಳನ್ನು ಇಲಾಖಾ ಮುಖ್ಯೇಸರರಿಗೆ ಕೊಡಲಾಗಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ಗ್ರಾಮ ಗಳಲ್ಲಿ ಈ ವಿಲೇಜ್ ಪಂಚಾಯಿತಿ ಕಂದಾಯವನ್ನು ಕೂಡ ವಸೂಲ್ಮಾಡಲು ಈ ತೋಟಿತಳವಾರಿಗಳನ್ನೇ ಉಪಯೋಗಿಸಿಕೊಳ್ಳುತ್ತಿದ್ದಾರೆ ಎನ್ನತಕ್ಕ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಾದರೆ ಆ ಪಂಚಾಯಿತಿ ಹಣವನ್ನು ಈಗ ಯಾರು ವಸೂಲ್ಮಾಡುತ್ತಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಪಟೇಲ್ ಶ್ಯಾನುಭೋಗರುಗಳು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ತೋಟಿ ತಳವಾರರುಗಳಿಗೆ ಒಂದು ನಿಯಮಿತವಾಧ ಕೆಲಸವೂ ಇಲ್ಲ ಮತ್ತು ಒಂದು ನಿಯಮಿತವಾದ ಸಂಬಳವೂ ಇಲ್ಲ ಅಲ್ಲವೇ?

(ಉತ್ತರವಿಲ್ಲ.)

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಈ ತೋಟಿ ತಳವಾರರು ಮಾಡುತ್ತಿರುವ ಕೆಲಸ ಬಹಳ ಅಪಮಾನಕರವಾದಂಥ ಕೆಲಸವಾಗಿರುವುದರಿಂದ ಅವರು ಇತರ ಸಮಾಜ ಸ್ನೇಹಿತರಂತೆ ಸರಿಸಮಾನತೆಯಲ್ಲಿ ಬೆಳೆಯಲು ಇದರಿಂದ ತೊಂದರೆಯಾಗಿದೆ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರನ್ನು ಬಲಾತ್ಕಾರವಾಗಿ ನೀವು ಈ ಕೆಲಸವನ್ನು ಮಾಡಲೇಬೇಕೆಂದು ಯಾರೂ ಒತ್ತಾಯಪಡಿಸುತ್ತಿಲ್ಲ. ಸರ್ಕಾರಕ್ಕೆ ಅಂಥ ಅಭಿಪ್ರಾಯವೂ ಇಲ್ಲ. ಅವರಿಗೆ, ಇಷ್ಟವಿಲ್ಲದಿದ್ದರೆ ರಾಜೀನಾಮೆ ಕೊಡಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರಿಗೆ ಬರತಕ್ಕಂಥ ಉತ್ಪತ್ತಿಯೇನಿದೆಯೋ ಅದನ್ನೇ ಅವರು ನಂಬಿಕೊಂಡು ಕೆಲಸಮಾಡುತ್ತಿರುವಾಗ ಅವರಿಗೆ ತಾವು ಕೊಡತಕ್ಕ ಬೆಂಬಲವಾದರೂ ಏನು ?

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ಮಿರಾಸೆ ಕೊಡಲಾಗುತ್ತಿದೆ. ಇನಾಂ ಜಮೀನುಗಳಿರುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಅವರಿಗೆ ಆ ಮಿರಾಸೆ ನರಿಯಾಗಿ ದೊರೆಯುತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ವಿ. ಮಸಿಯಪ್ಪ.—ಈಗ ಮೈಸೂರಿಗೆ ಅಕ್ಕಪಕ್ಕ ದಲ್ಲಿ ಅಂಟಿಕೊಂಡಿರುವ ಮತ್ತು ಇತ್ತೀಚೆಗೆ ಮೈಸೂರಿಗೆ ಸೇರಿಕೊಂಡಿರುವ ಭಾಗಗಳಲ್ಲಿ ಈ ತೋಟಿ ತಳವಾರರಿಗೆ ನಂಬಳ ಕೊಡುತ್ತಿದ್ದಾರೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ವಿ. ಮಸಿಯಪ್ಪ.—ಈ ತೋಟಿತಳವಾರರಿಗೆ ನಂಬಳ ಸಾರಿಗೆಗಳನ್ನು ಕೊಡಬೇಕೆಂಬುದಾಗಿ ಗುಂಡಪ್ಪಗೌಡ ಸಮಿತಿಯವರು ಶಿಫಾರ್ಸುಮಾಡಿದ್ದರೆಂಬ ಅಂಶವಾದರೂ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ವಿ. ಮಸಿಯಪ್ಪ.—ಈಗ ಈ ತೋಟಿತಳವಾರರಿಗೆ ನಂಬಳ ಸಾರಿಗೆ ಕೊಡುತ್ತಿಲ್ಲವೆಂಬ ಕಾರಣದಿಂದ ಹಳ್ಳಿಗಳಲ್ಲಿ ಈ ಕಂದಾಯ ವಸೂಲಿಗೆ ಬಹಳ ತೊಂದರೆಯಾಗಿ ಅದು ಮುಲ್ಕ ನಿಲ್ಲಲು ಕಾರಣವಾಗಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಜಿ. ಶಿವಪ್ಪ.—ಈಗ ಎಲ್ಲೆಲ್ಲಿ ಸಾಗುವಳಿಗೆ ಅನುಕೂಲವಾದ ಜಮೀನಿದೆಯೋ ಅದನ್ನಾದರೂ ಇವರಿಗೆ ಇನ್ನೂ ಸ್ವಲ್ಪ ಜಾಸ್ತಿಯಾಗಿ ಕೊಟ್ಟು ಆ ಮೂಲಕವಾಗಿಯಾದರೂ ಈ ಪ್ರಶ್ನೆಯನ್ನು ಇತ್ಯರ್ಥ ಮಾಡಲು ಪ್ರಯತ್ನಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೆಲ್ಲಾ ಈಗ ನಿರ್ಧರವಾಗಿ ಹೇಳಲಾರೆ. ಆಲೋಚನೆ ಮಾಡ ಬೇಕಾಗಿದೆ.

Mr. SPEAKER.—The House will now rise for Lunch and meet at 10-40.

*The House adjourned for Lunch at Ten Minutes past Ten of the Clock and met again at Forty Minutes past Ten of the Clock.*

[MR. SPEAKER in the Chair.]

## MYSORE MINES (AMENDMENT) BILL, 1955.

### Introduction

Sri Kadidal MANJAPPA (Minister for Revenue and Public Works).—I beg to introduce the Mysore Mines (Amendment) Bill, 1955.

## OFFICIAL RESOLUTION.

*Re*: **Draft Amendment to Madras General Sales-Tax (Turnover and Assessment) Rules, 1939.**

Sri Kadidal MANJAPPA (Minister for Revenue and Public Works).—There is a small resolution. It is an official Resolution. I beg your permission to move that. It may not take more than a few minutes.

Mr. SPEAKER.—Yes.

Sri Kadidal MANJAPPA.—I beg to move the following Resolution :

"That the following draft of an amendment to the Madras General Sales-Tax (Turnover and Assessment) Rules, 1939, which it is proposed to make in exercise of the powers conferred by sub-section (4) of section 3 and section 19 of the Madras General Sales-Tax Act, 1939 (Madras Act IX of 1939) as in force in Bellary District, be approved :—

DRAFT AMENDMENT.

"In rule 4-B of the said rules, for the words, brackets and figures 'in items (i) to (vii)' the words, brackets and figures 'in items (i) to (viii)' shall be substituted."

This is a very simple resolution. I had to move the resolution because of the fact that under the turnover and assessment rules which have been framed under the Madras Act, any modification of the rules has to be done by means of a resolution adopted by the House. This modification has been necessitated on account of the amendment made by the House to the Madras General Sales-Tax Act. In accordance with that amended Act, these rules have been framed authorising the Government to levy taxes at a certain rate. In the Exploratory Memorandum, the details are mentioned.

Mr. SPEAKER.—Motion moved :

"That the following draft of an amendment to the Madras General Sales-Tax (Turnover and Assessment) Rules, 1939; which it is proposed to make in exercise of the